ಮಾತುಕತೆ

# ಎಲ್ಲರ ಜೊತೆ ನಾನೂ, ಅಷ್ಟೇ...

## ಗೃಹಿಣಿ, ಲೇಖಕಿ, ಅನುವಾದಕಿ ಪದ್ಮಾ ಶ್ರೀರಾಮ್ ಸಂದರ್ಶನ



**ಜ.ನಾ. ತೇಜಶ್ರೀ**

**ಚಿತ್ರಗಳು: ಅನೂಪ್ ರಾಘ್ ಟಿ.**

ಪದ್ಮಾ ಶ್ರೀರಾಮ ಅವರ ಜೀವನವನ್ನು ಕಳೆದ ಶತಮಾನದ ಪೂರ್ವಾರ್ಧದಲ್ಲಿ ಹೆಣ್ಣುಮಕ್ಕಳು ಸಕಾರಾತ್ಮಕವಾಗಿ ಅರಳಿದ ಬಗೆಯ ಒಂದು ವಿಶಿಷ್ಟ ಮಾದರಿಯಾಗಿ ನೋಡಬಹುದು. ಅದು ಗಾಂಧೀವಾದ ಮತ್ತು ಆರೋಗ್ಯಕರವಾದ ಆಧುನಿಕತೆಯು ನಾಡಿನ ವಾತಾವರಣದಲ್ಲಿ ಹಾಸುಹೊಕ್ಕಾಗಿದ್ದ ಕಾಲ; ಸುಧಾರಣಾವಾದ ಮತ್ತು ಮಾನವತಾವಾದಗಳು ವಿದ್ಯಾವಂತ ಕುಟುಂಬಗಳ ಮೇಲೆ ದಟ್ಟವಾದ ಪ್ರಭಾವ ಬೀರಿದ್ದ ಕಾಲ. ಪದ್ಮಾ ಅವರ ಕೃಷಿಕ–ನಾಗರಿಕ ಹಿನ್ನೆಲೆ ಮತ್ತು ತಂದೆತಾಯಿಗಳಿಂದ ದೊರೆತ ಮುಕ್ತ ಅವಕಾಶಗಳು ಜನಸಾಮಾನ್ಯರೊಂದಿಗೆ ಬೆರೆತು ಒಂದಾಗಲು ಅವರಿಗೆ ನೆರವಾಗಿವೆ. ಕುವೆಂಪು, ತೇಜಸ್ವಿ, ಶ್ರೀರಾಮ, ಜಿ.ಎಚ್. ನಾಯಕ, ಮೀರಾ ನಾಯಕ ಮುಂತಾದವರ ಪ್ರಭಾವವು 'ನಾನೇ ಮೇಲು' ಎನ್ನುವ ಬಂಧನದಿಂದ ಬಿಡುಗಡೆ ನೀಡಿದೆ. ಆದರೆ ಪದ್ಮಾ ಅವರು ಇವುಗಳನ್ನೆಲ್ಲ ಒಳಗೊಂಡೂ, ಇವನ್ನು ಮೀರಿ ತಮ್ಮದೇ ಆದ ಆಸಕ್ತಿಗಳನ್ನು ಬೆಳೆಸಿಕೊಂಡರು. ಸಸ್ಯಶಾಸ್ತ್ರದಿಂದ ಸಂಗೀತದವರೆಗೆ, ಕೃಷಿಯಿಂದ ಚಲನಚಿತ್ರಗಳವರೆಗಿನ ಅವರ ಆಸಕ್ತಿಯ ಹರಹು ಅಪರೂಪದ್ದು. ಒಳ್ಳೆಯ ಗಾಯಕಿಯೂ ಆದ ಪದ್ಮಾ ಅವರು 'ನಾನು ಹಿನ್ನೆಲೆ ಗಾಯಕಿ ಆಗಬೇಕು ಅಂತಿದ್ದೆ... ಇನ್ನೂ ಕೆಲವೊಮ್ಮೆ ನ್ಯಾಚುರಲಿಸ್ಟ್ ಆಗಬೇಕು ಅನ್ನಿಸ್ತಿತ್ತು' ಎಂದು ಮುಗ್ಧವಾಗಿ ನಗುತ್ತ ಹೇಳುವ ರೀತಿಯು ಅವರೊಳಗಿನ ಮಗುತನವನ್ನು ನನ್ನೆದುರು ಅನಾವರಣಗೊಳಿಸಿದೆ. ಸಹಜತೆ, ಸರಳತೆ ಮತ್ತು ನಿರಹಂಕಾರವು ಪದ್ಮಾ ಅವರ ವ್ಯಕ್ತಿತ್ವದ ನೆಲೆಗಳು. ಈ ಸಂದರ್ಶನದ ಶಕ್ತಿಯೂ ಅದೇ ಆಗಿದೆ. ಹೇಳುವುದನ್ನು ನಿರಾಡಂಬರವಾಗಿ ಹೇಳುವ ಅವರ ರೀತಿಯು ಬರವಣಿಗೆಗಿಂತ ಬದುಕು ದೊಡ್ಡದು ಎನ್ನುವುದನ್ನು ತೋರಿಸುತ್ತದೆ, ಕಲಿಸುತ್ತದೆ. ನೆನಪು–ವಾಸ್ತವಗಳ ನಡುವೆ ಟಕ್ಕಾಟಿಕ್ಕಿಯಾಡುತ್ತಿರುವ ಈ ಹೊತ್ತಿನಲ್ಲೂ, ಬದುಕನ್ನು ಕುರಿತು ಏನೊಂದೂ ದೂರುಗಳಿಲ್ಲದ ಪದ್ಮಾ ಅವರ ತುಂಬು ಬದುಕಿನ ಚೈತನ್ಯವು ತಾಯಿಯಂತೆ ನಮ್ಮನ್ನು ಪೊರೆಯುವಂತದ್ದು.